# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯಲೆಕ್ಕಾಧಿಕಾರಿರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು–560 002

ಸಂ:ಮುಲೆಅ/ಪಿಆರ್/ಜಿಎಸ್‌ಟಿ–01/17–18 ದಿನಾಂಕ:11–09–2017

21.09.2017

## ಸುತ್ತೋಲೆ

**ವಿಷಯ:** ಕೇಂದ್ರ ಸರ್ಕಾರವು ದಿನಾಂಕ:01–07–2017 ರಿಂದ ಅನ್ವಯವಾಗುವಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ನ್ನು ಜಾರಿಗೆ ತಂದಿದ್ದು, ಅದರನ್ವಯ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ.

*****

ಕೇಂದ್ರ ಸರ್ಕಾರವು ದಿನಾಂಕ:01–07–2017 ರಿಂದ ರಾಷ್ಟ್ರ ವ್ಯಾಪ್ತಿಗೆ ಅನ್ವಯಿಸುವಂತೆ, ಈ ಹಿಂದೆ ಇದ್ದ ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ, ವ್ಯಾಟ್, ಕೇಂದ್ರ ಮಾರಾಟ ತೆರಿಗೆ, ಸೀಮಾ ತೆರಿಗೆ, ಮನರಂಜನಾ ತೆರಿಗೆ, ಬೆಟ್ಟಿಂಗ್ ತೆರಿಗೆ, ಇತ್ಯಾದಿ ಒಟ್ಟು 13 ತೆರಿಗೆಗಳನ್ನು ರದ್ದುಪಡಿಸಿ, ಎಲ್ಲಾ ತೆರಿಗೆಗಳನ್ನು ಒಗ್ಗೂಡಿಸಿ, ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ನ್ನು ಜಾರಿಗೆ ತಂದಿರುತ್ತದೆ. ಕೇಂದ್ರದ ವ್ಯಾಪ್ತಿಯಲ್ಲಿ ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 (CGST) ಮತ್ತು ಸಂಬಂದಪಟ್ಟ ರಾಜ್ಯಗಳ ವ್ಯಾಪ್ತಿಯಲ್ಲಿ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 (SGST) ಜಾರಿಯಲ್ಲಿ ಇರುತ್ತದೆ.

ಕರ್ನಾಟಕ ಸರ್ಕಾರವು ಸಹ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ನ್ನು ಜಾರಿಗೆ ತಂದಿರುತ್ತದೆ. ಅದರಂತೆ ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 (84–J)ರಲ್ಲಿ **"ವ್ಯಕ್ತಿ" (Person)** ಎಂಬ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆ/ಪ್ರಾಧಿಕಾರವು ಒಳಗೊಂಡಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒಂದು ಸ್ಥಳೀಯ ಸಂಸ್ಥೆಯಾಗಿರುವುದರಿಂದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಪಾಲಿಕೆಯನ್ನು **"ವ್ಯಕ್ತಿ"** (Person) ಎಂದು ಪರಿಗಣಿಸಲಾಗಿರುತ್ತದೆ.

ಕರ್ನಾಟಕ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 (17–I)ರಲ್ಲಿ **"ವ್ಯವಹಾರ" (Business)** ಎಂಬ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಸ್ಥಳೀಯ ಸಂಸ್ಥೆ/ಪ್ರಾಧಿಕಾರವು ಒಳಗೊಂಡಿರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒಂದು ಸ್ಥಳೀಯ ಸಂಸ್ಥೆಯಾಗಿರುವುದರಿಂದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಪಾಲಿಕೆಯ ಎಲ್ಲಾ ಆರ್ಥಿಕ ಚಟುವಟಿಕೆಗಳನ್ನು **"ವ್ಯವಹಾರ" (Business)** ಎಂದು ಪರಿಗಣಿಸಲಾಗಿರುತ್ತದೆ.

ಪಾಲಿಕೆಯ ಆರ್ಥಿಕ ಚಟುವಟಿಕೆಗೆ ಸಂಬಂಧಿಸಿದಂತೆ ಪಾಲಿಕೆಯು ಒದಗಿಸುವ ಸೇವೆಗಳು, ಪಾಲಿಕೆಯು ಪಡೆಯುವ ಸೇವೆಗಳು, ಪಾಲಿಕೆಯು ಮಾರಾಟ ಮಾಡುವ ಸರಕುಗಳು ಮತ್ತು ಪಾಲಿಕೆಯು ಖರೀದಿ ಮಾಡುವ ಸರಕುಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ವ್ಯಾಪ್ತಿಗೆ ಒಳಪಟ್ಟಿರುತ್ತವೆ.

ಪಾಲಿಕೆಯು ಸದರಿ ಕಾಯ್ದೆಯಂತೆ ಕಟಾಯಿಸಿದ ಶಾಸನಾತ್ಮಕ ತೆರಿಗೆಗಳನ್ನು, ಕೇಂದ್ರ (CGST) (IGST)ಮತ್ತು (SGST) ರಾಜ್ಯ ಸರ್ಕಾರಕ್ಕೆ ನಿಗಧಿತ ಅವಧಿಯಲ್ಲಿ ಪಾವತಿ ಮಾಡಿ, ಕಾಯಿದೆಯಲ್ಲಿ ನಿಗಧಿಗೊಳಿಸಿರುವ ರಿಟರ್ನ್‌ಗಳಾದ R1, R2, R3 ಮತ್ತು ಇತರೆ ರಿಟರ್ನ್‌ಗಳನ್ನು ಸಲ್ಲಿಸಬೇಕಾಗಿರುತ್ತದೆ.

**ಪಾಲಿಕೆಯು ಒದಗಿಸುವ ಸೇವೆಗಳಿಗೆ ಸಂಬಂಧಿಸಿದಂತೆ :**

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಹೊರಡಿಸಿರುವ ಅಧಿಸೂಚನೆ–12, ದಿನಾಂಕ:28–06–2017 ರ ಕ್ರಮಸಂಖ್ಯೆ (4) ಮತ್ತು (5) ರಲ್ಲಿ ತಿಳಿಸಿರುವಂತೆ ಭಾರತ ಸಂವಿಧಾನ ಪರಿಚ್ಛೇದ 243W & 243G ರ ಅನುಸೂಚಿ–12 ರಂತೆ ಸ್ಥಳೀಯ ಸಂಸ್ಥೆ/ಪ್ರಾಧಿಕಾರಗಳಿಗೆ ವಹಿಸಿರುವ ಕಾರ್ಯಗಳಿಗೆ ಸಂಬಂಧಿಸಿದಂತೆ ಒದಗಿಸುವ **ಸೇವೆಯನ್ನು** ಕಾಯಿದೆಯ ವ್ಯಾಪ್ತಿಯಿಂದ ವಿನಾಯಿತಿ ನೀಡಲಾಗಿರುತ್ತದೆ. ಸದರಿ ಕಾಯಿದೆಯಡಿಯಲ್ಲಿ ವಿನಾಯಿತಿ ಪಡೆಯಬಹುದಾದ ಮತ್ತು ತೆರಿಗೆ ಸಂಗ್ರಹಿಸಬೇಕಾದ ಪಟ್ಟಿಯನ್ನು ಪ್ರತ್ಯೇಕವಾಗಿ ತಯಾರಿಸಿ ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.

(**Services** by Central Government, State Government, Union territory, local authority or governmental authority by way of any activity in relation to any function entrusted to a municipality under article 243 W of the Constitution & Services by a governmental authority by way of any activity in relation to any function entrusted to a Panchayat under article 243G of the Constitution)

**ಪಾಲಿಕೆಯು ಒದಗಿಸುವ/ಮಾರಾಟ ಮಾಡುವ ಸರಕುಗಳಿಗೆ ಸಂಬಂಧಿಸಿದಂತೆ :**

ಪಾಲಿಕೆಯು ಒದಗಿಸುವ/ಮಾರಾಟ ಮಾಡುವ ಸರಕುಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ವಿನಾಯಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಪಾಲಿಕೆಯ ವತಿಯಿಂದ ಮಾರಾಟ ಮಾಡಬಹುದಾದ ಸರಕುಗಳೊಂದಿಗೆ ಜಿ.ಎಸ್.ಟಿಯನ್ನು ಸಹ ಸಂಗ್ರಹಿಸಲು ಕ್ರಮವಹಿಸುವುದು.

**ಪಾಲಿಕೆಯು ಪಡೆಯುವ ಸೇವೆಗಳಿಗೆ ಸಂಬಂಧಿಸಿದಂತೆ :**

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಹೊರಡಿಸಿರುವ ಅಧಿಸೂಚನೆ–12, ದಿನಾಂಕ: 28–06–2017 ರ ಕ್ರಮಸಂಖ್ಯೆ (3)ರಲ್ಲಿ ತಿಳಿಸಿರುವಂತೆ ಭಾರತ ಸಂವಿಧಾನ ಪರಿಚ್ಛೇದ 243W ರ ಅನುಸೂಚಿ–12 ರಲ್ಲಿನ ಕಾರ್ಯಗಳಿಗೆ ಮತ್ತು 243 G ರ ಕಾರ್ಯಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆ/ಪ್ರಾಧಿಕಾರಗಳು ಪಡೆಯುವ **ಶುದ್ಧ ಸೇವೆಯನ್ನು** ಕಾಯಿದೆ ವ್ಯಾಪ್ತಿಯಿಂದ ಈ ಕೆಳಕಂಡಂತೆ ವಿನಾಯಿತಿ ನೀಡಲಾಗಿರುತ್ತದೆ.

(**Pure** services (excluding works contract service or other composite supplies involving supply of any goods) provided to the local authority by way of any activity in relation to any function entrusted to a Panchayat under article 243G of the Constitution or in relation to any function entrusted to a Municipality under article 243W of the Constitution).

ಪಾಲಿಕೆಯು ಪಡೆಯುವ ಸೇವೆಗಳಲ್ಲಿ **Pure** servicesಗಳಿಗೆ ಮಾತ್ರ ವಿನಾಯಿತಿ ಪಡೆಯಬಹುದಾಗಿರುತ್ತದೆ. ಬೃಹತ್ ಪಾಲು ಹೊಂದಿರುವ ಸಿವಿಲ್ ಕಾಮಗಾರಿಗಳನ್ನು ಸೇವೆ ಎಂದು ಪರಿಗಣಿಸಲಾಗಿದ್ದರೂ ಸಹ Service but not Pure Service ಆಗಿರುವುದರಿಂದ ಅಂತಹವುಗಳಿಗೆ ಕಾಯಿದೆ ಅಡಿಯಲ್ಲಿ ವಿನಾಯಿತಿ ನೀಡಿರುವುದಿಲ್ಲ. ಸರಕು ಮತ್ತು ಸೇವೆ ಕಾಯಿದೆ ಅಡಿಯಲ್ಲಿ ನಿಗಧಿಪಡಿಸಿರುವ ದರದಂತೆ ಸೇವೆ ಒದಗಿಸುವ ಸಂಸ್ಥೆಗಳಿಗೆ ತೆರಿಗೆಯನ್ನು ಪಾವತಿ ಮಾಡಬೇಕಾಗಿರುತ್ತದೆ. ಆದ್ದರಿಂದ ಪಾಲಿಕೆಯು ಪಡೆಯುವ ಸೇವೆಗಳಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸೇವೆಯನ್ನು ಪ್ರತ್ಯೇಕವಾಗಿ ಮತ್ತು ಸರಕುಗಳನ್ನು ಪ್ರತ್ಯೇಕವಾಗಿ ಪಡೆಯಲು

ಟೆಂಡರ್ ಕರೆಯುವುದು. ಪಾಲಿಕೆಯು ಪಡೆಯುತ್ತಿರುವ ಈ ಕೆಳಕಂಡ ಸೇವೆಗಳಲ್ಲಿ ಸರಕು (Goods part) ಒಳಗೊಳ್ಳದೇ ಇದ್ದ ಪಕ್ಷದಲ್ಲಿ ತೆರಿಗೆ ಪಾವತಿ ಮಾಡಲು ವಿನಾಯಿತಿ ಪಡೆಯಬಹುದಾಗಿದೆ. ಕೆಲವು ಉದಾಹರಣೆಗಳು ಈ ಕೆಳಕಂಡಂತಿವೆ

- ಪಾಲಿಕೆಯು ತನ್ನ ಘನತ್ಯಾಜ್ಯ ನಿರ್ವಹಣೆಗೆ ಗುತ್ತಿಗೆದಾರರಿಂದ ಪಡೆಯುತ್ತಿರುವ ಸೇವೆಗಳು. (ಈ ಸೇವೆಯ ಗುತ್ತಿಗೆಯಲ್ಲಿ ಸರಕುಗಳನ್ನು ಸೇರಿಸಿ ಸೇವೆಯನ್ನು ಪಡೆದಲ್ಲಿ ಕಾಯಿದೆ ಅಡಿಯಲ್ಲಿ ವಿನಾಯಿಸಿ ಅನ್ವಯಿಸುವುದಿಲ್ಲ ನಿಗಧಿತ ದರದಲ್ಲಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ)
- ಸೊಳ್ಳೆನಿಯಂತ್ರಣಕ್ಕಾಗಿ ಗುತ್ತಿಗೆದಾರರಿಂದ ಪಡೆಯುವ ಫಾಗಿಂಗ್ ಸೇವೆಗಳು (ರಾಸಾಯನಿಕ (Goods) ಸರಬರಾಜು ಒಳಗೊಂಡಿದ್ದಲ್ಲಿ ಕಾಯಿದೆ ಅಡಿಯಲ್ಲಿ ನಿಗಧಿತ ದರದಲ್ಲಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ)
- ಪಾಲಿಕೆಯ ಶಾಲಾ ಮತ್ತು ಆಸ್ಪತ್ರೆಗಳಿಗೆ ಗುತ್ತಿಗೆದಾರರಿಂದ ಪಡೆಯುವ ಸ್ವಚ್ಛತಾ ಸೇವೆಗಳು (ಸ್ವಚ್ಛತಾ ಸೇವೆಗಳಲ್ಲಿ ಸ್ವಚ್ಛತೆಯ ಸರಕುಗಳಾದ ಸಾಬೂನು, ಪೆನಾಯಿಲ್, ನುಸಿಉಂಡೆ, ಇನ್ನಿತರೆ ಸರಕುಗಳನ್ನೊಳಗೊಂಡ ಸೇವೆಯ ಗುತ್ತಿಗೆಯಾದಲ್ಲಿ ನಿಗಧಿತ ದರದಲ್ಲಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ)
- ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರಿಂದ ಪಡೆಯುವ ಪಿ.ಎಂ.ಸಿ. 3ನೇ ವ್ಯಕ್ತಿ ತಪಾಸಣೆ, ಗುಣನಿಯಂತ್ರಣ ವರದಿ ಸೇವೆಗಳು.
- ರಸ್ತೆ ಬದಿ ಚರಂಡಿಗಳಲ್ಲಿ ಹೂಳೆತ್ತುವ ಕಾಮಗಾರಿಗಳು. (ಇದರೊಂದಿಗೆ ದುರಸ್ಥಿ ಕಾರ್ಯಗಳನ್ನು ನಿರ್ವಹಿಸಿದಲ್ಲಿ ನಿಗಧಿತ ದರದಲ್ಲಿ ತೆರಿಗೆಯನ್ನು ಪಾವತಿಸಬೇಕಾಗುತ್ತದೆ)

**ಪಾಲಿಕೆಯು ಪಡೆಯುವ ಸರಕುಗಳಿಗೆ ಸಂಬಂಧಿಸಿದಂತೆ :**

ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಡಿಯಲ್ಲಿ ಪಾಲಿಕೆಯು ಪಡೆಯುವ ಸರಕುಗಳಿಗೆ ಸಂಬಂಧಿಸಿದಂತೆ ಕಾಯಿದೆ ಅಡಿಯಲ್ಲಿ ಯಾವುದೇ ವಿನಾಯಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಪಾಲಿಕೆಯು ಪಡೆಯುವ ಎಲ್ಲಾ ಸರಕುಗಳ ಮೇಲೆ ನಿಗಧಿಪಡಿಸಿರುವ ತೆರಿಗೆಯನ್ನು ಗುತ್ತಿಗೆದಾರರಿಗೆ ಬಿಲ್ಲಿನೊಂದಿಗೆ ಪಾವತಿಸಬೇಕಾಗಿರುತ್ತದೆ.

**ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪಾಲಿಕೆಯಲ್ಲಿ ಸರಕು ಮತ್ತು ಸೇವೆಗಳನ್ನು ಖರೀದಿಸುವ ಸಂದರ್ಭಗಳಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ :**

- ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 **ಅಡಿಯಲ್ಲಿ ನೊಂದಾಯಿಸದ ಸರಬರಾಜುದಾರರಿಂದ ಸರಕು ಮತ್ತು ಸೇವೆಯನ್ನು ಪಡೆಯುವ ಬಗ್ಗೆ** :

  ಪಾಲಿಕೆಯು ಎಲ್ಲಾ ಸರಕು ಮತ್ತು ಸೇವೆಗಳನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 **ಅಡಿಯಲ್ಲಿ** ನೊಂದಾಯಿಸಿದ ಸರಬರಾಜುದಾರರಿಂದಲೇ ಪಡೆಯುವುದು. ಇಲ್ಲವಾದಲ್ಲಿ Reverse charge ಆಧಾರದ ಮೇಲೆ ಪಾಲಿಕೆಗೆ ಆಯಾ ಸರಕು ಮತ್ತು ಸೇವೆಗಳಿಗೆ ತಗಲುವ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುತ್ತದೆ. ಆದ್ದರಿಂದ ಕಾಯಿದೆ ಅಡಿಯಲ್ಲಿ **ನೊಂದಾಯಿಸಿದ** ಸರಬರಾಜುದಾರರಿಂದ ಸರಕು ಮತ್ತು ಸೇವೆಗಳನ್ನು ಪಡೆಯುವುದು ಸೂಕ್ತವಾಗಿರುತ್ತದೆ.

- **GSTN ಸಂಖ್ಯೆ ಹೊಂದಿರುವ Invoice ನ್ನೇ ಪಡೆಯುವ ಬಗ್ಗೆ :**

  ದಿನಾಂಕ:01-07-2017ರಿಂದ ಅನ್ವಯವಾಗುವಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 **ವ್ಯಾಪ್ತಿಯಲ್ಲಿ ಬರುವ** ಯಾವುದೇ ಸರಕು ಮತ್ತು ಸೇವೆಗಳಿಗೆ ಹಳೆಯ TIN ಮತ್ತು ಸೇವಾ ತೆರಿಗೆ ಸಂಖ್ಯೆಯನ್ನು ಬಳಸುವಂತಿಲ್ಲ. ಆದ್ದರಿಂದ ದಿನಾಂಕ:01-07-2017ರ ನಂತರ ಪಡೆಯುವ ಸೇವೆ ಮತ್ತು ಸರಕುಗಳಿಗೆ ಸರಬರಾಜುದಾರರು/ ಗುತ್ತಿಗೆದಾರರಿಂದ **GSTN ಸಂಖ್ಯೆ ಹೊಂದಿರುವ Invoice ನ್ನೇ ಪಡೆಯುವುದು.**

- **IFMS ಮೂಲಕವೇ Receipt cum Invoice Generate ಮಾಡುವ ಬಗ್ಗೆ :**

  ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಅಡಿಯಲ್ಲಿ ತೆರಿಗೆ ಪಾವತಿಸಬೇಕಾದ ಪಾಲಿಕೆಯ ಸರಕು ಮತ್ತು ಸೇವೆಗಳಿಗೆ ಕಡ್ಡಾಯವಾಗಿ IFMS ಮೂಲಕವೇ Generate ಮಾಡಿದ ಕ್ರಮಾಂಕವಾಗಿರುವ Invoice ನಲ್ಲಿಯೇ ಜಿ.ಎಸ್.ಟಿ ತೆರಿಗೆ ಸಂಗ್ರಹಿಸುವುದು. ಈ ರೀತಿ IFMS ನಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಲು ಮುಖ್ಯಲೆಕ್ಕಾಧಿಕಾರಿಗಳು ತುರ್ತಾಗಿ ಕ್ರಮವಹಿಸುವುದು.

- **ಪಾಲಿಕೆಯ GSTN ಸಂಖ್ಯೆ :**

  ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಅಡಿಯಲ್ಲಿ ನೊಂದಾಯಿಸಿರುವ ಪಾಲಿಕೆಯ GSTN ಸಂಖ್ಯೆ **29AAALB1608F1ZK** ಆಗಿದ್ದು, ಪಾಲಿಕೆಯ ಎಲ್ಲಾ ಸರಕು ಮತ್ತು ಸೇವೆಗಳನ್ನು ಪಡೆಯಲು ಮತ್ತು ನೀಡಲು ಕಡ್ಡಾಯವಾಗಿ ಈ ಸಂಖ್ಯೆಯನ್ನು ನಮೂದಿಸತಕ್ಕದ್ದು.

- **ದಿನಾಂಕ:01-07-2017ರ ನಂತರ ನಿರ್ವಹಿಸುವ ಕಾಮಗಾರಿಗಳಿಗೆ/ಸರಬರಾಜುಗಳಿಗೆ ಗುತ್ತಿಗೆದಾರರಿಂದ Invoice (ಬಿಲ್ಲು) ಪಡೆಯುವ ಬಗ್ಗೆ :**

  ದಿನಾಂಕ:01-07-2017ರಿಂದ ಅನ್ವಯವಾಗುವಂತೆ ನಿರ್ವಹಿಸುವ ಕಾಮಗಾರಿಗಳಿಗೆ/ಸರಬರಾಜುಗಳಿಗೆ ಗುತ್ತಿಗೆದಾರರಿಂದ ಕಾಯಿದೆಯಲ್ಲಿ ನಿಗಧಿಪಡಿಸಿರುವ ಮಾನದಂಡದಂತೆ Invoice (ಬಿಲ್ಲು)ನ್ನು ನೀಡಲು ಸಂಬಂಧಪಟ್ಟ ಗುತ್ತಿಗೆದಾರರಿಗೆ/ಸರಬರಾಜುದಾರರಿಗೆ ಸೂಚಿಸುವುದು. ಎಲ್ಲಾ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಾಲಿ ಚಾಲ್ತಿಯಲ್ಲಿರುವ C.C.Billನ ಜೊತೆಯಲ್ಲಿ ಕಾಯಿದೆಯಲ್ಲಿ ನಿಗಧಿಪಡಿಸಿರುವ ಕ್ರಮಾಂಕಿತ ಗುತ್ತಿಗೆದಾರರ Invoice (ಬಿಲ್ಲು)ನ್ನು ಗುತ್ತಿಗೆದಾರರಿಂದ ಪಡೆಯುವುದು.. ಸದರಿ Invoice (ಬಿಲ್ಲು)ನಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಯ ವೆಚ್ಚದ ಮೊತ್ತ, CGST ಮತ್ತು SGST ಪ್ರತ್ಯೇಕವಾಗಿ ವಿಂಗಡಿಸಿ ನೀಡಲು ಸೂಚಿಸುವುದು. (Work done cost + CGST+SGST=Bill Amount). ಕಾಮಗಾರಿಗಳಿಗೆ ಮುಂಗಡ ಹಣ ಪಾವತಿಸುವ ಸಂದರ್ಭದಲ್ಲೂ ಸಹ ಮೇಲಿನಂತೆ ಕ್ರಮವಹಿಸುವುದು.

- **ದಿನಾಂಕ:30-06-2017 ರ ವರೆಗೆ ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ TDS ಕಟಾವಣೆ ಬಗ್ಗೆ :**

  ದಿನಾಂಕ 30-06-2017 ರ ವರೆಗೆ ಭಾಗಶಃ/ಸಂಪೂರ್ಣವಾಗಿ ನಿರ್ವಹಿಸಿರುವ ಮತ್ತು ದಿನಾಂಕ:01-07-2017ರ ನಂತರ ಪಾವತಿಯಾಗುವ ಎಲ್ಲಾ ಕಾಮಗಾರಿಗಳಿಗೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಅನ್ವಯವಾಗದೇ ಇರುವ ಹಿನ್ನೆಲೆಯಲ್ಲಿ ಮತ್ತು ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆರವರ ಸುತ್ತೋಲೆ ಸಂ:07/2017-18, ದಿನಾಂಕ:18-07-2017ರಂತೆ ವ್ಯಾಟ್ ಕಾಯಿದೆಯಡಿಯಲ್ಲಿ **ಶೇ.4ರಷ್ಟು TDS ಕಟಾಯಿಸಿ ಪಾವತಿಸಲು ಸೂಚಿಸಿರುವ ಮೇರೆಗೆ ಅಂತಹ** ಕಾಮಗಾರಿ ಬಿಲ್ಲುಗಳಲ್ಲಿ ವ್ಯಾಟ್ ಕಾಯಿದೆಯಡಿಯಲ್ಲಿ **ಶೇ.4ರಷ್ಟು TDS ಕಟಾಯಿಸುವುದು**

- **ದಿನಾಂಕ:01-07-2017ರ ನಂತರ ನಿರ್ವಹಿಸುವ ಕಾಮಗಾರಿಗಳಿಗೆ/ಸರಬರಾಜುಗಳಿಗೆ ಸಂಬಂಧಿಸಿದಂತೆ TDS ಕಟಾವಣೆ ಬಗ್ಗೆ :**

  ದಿನಾಂಕ:01-07-2017ರ ನಂತರ ನಿರ್ವಹಿಸುವ ಕಾಮಗಾರಿಗಳಿಗೆ/ಸರಬರಾಜುಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಸೆಕ್ಷನ್ 51 ರಂತೆ CGST ಶೇ 1% ಮತ್ತು SGST ಶೇ 1% ಕಟಾಯಿಸಿ ಪಾವತಿಸಬೇಕಾಗಿರುತ್ತದೆ. ಆದರೆ ಸದರಿ ಸೆಕ್ಷನ್ 51 ರಂತೆ ಕ್ರಮವಹಿಸುವುದನ್ನು ತಾತ್ಕಲಿಕವಾಗಿ ತಡೆಹಿಡಿದಿರುವ ಮೇರೆಗೆ ಮುಂದೆ ಜಾರಿಗೊಳಿಸುವ ದಿನಾಂಕದವರೆವಿಗೂ **TDS ಕಟಾಯಿಸಲು ಅವಕಾಶವಿರುವುದಿಲ್ಲ**. ಆದರೆ ಪಾಲಿಕೆಯಲ್ಲಿ ಗುತ್ತಿಗೆದಾರರ ಬಿಲ್ಲುಗಳನ್ನು ಆನ್‌ಲೈನ್‌ನಲ್ಲಿ ಐ.ಎಫ್.ಎಮ್.ಎಸ್ ಮೂಲಕ ಜೇಷ್ಠತೆ ಅನುಸಾರ ಅನುದಾನ ಲಭ್ಯತೆಗೆ ಅನುಗುಣವಾಗಿ ಪಾವತಿ ಮಾಡುತ್ತಿರುವುದರಿಂದ ಗುತ್ತಿಗೆದಾರರ ಬಿಲ್ಲುಗಳನ್ನು ಅಂಗೀಕರಿಸಿ ಬಿ.ಆರ್ ನಮೂದಿಸುವ ಹಾಗೂ ಪಾವತಿ ಮಾಡುವ ದಿನಾಂಕದಲ್ಲಿ ಅಂತರವಿರುವುದರಿಂದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಸೆಕ್ಷನ್ 51 ಜಾರಿಯಾಗುವ ವರೆವಿಗೂ ಈ ಕೆಳಕಂಡಂತೆ ಕ್ರಮವಹಿಸುವುದು ಸೂಕ್ತವಾಗಿರುತ್ತದೆ.

  1. ದಿನಾಂಕ:01-07-2017ರ ನಂತರ ನಿರ್ವಹಿಸುವ ಪಾಲಿಕೆ ಅನುದಾನದ ಕಾಮಗಾರಿಗಳಿಗೆ/ಸರಬರಾಜುಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಸೆಕ್ಷನ್ 51 ರಂತೆ CGST ಶೇ 1% ಮತ್ತು SGST ಶೇ 1% ನ್ನು ತಾತ್ಕಲಿಕವಾಗಿ (Provisional basis) ಬಿಲ್ಲಿನಲ್ಲಿ **ಕಟಾಯಿಸಿ** ಬಿಲ್ಲನ್ನು ಅಂಗೀಕರಿಸುವುದು. ಸದರಿ ಬಿಲ್ಲನ್ನು ಪಾವತಿಯ ಸಂದರ್ಭದಲ್ಲಿ ಸದರಿ ಸೆಕ್ಷನ್ 51 ಜಾರಿಯಿದ್ದಲ್ಲಿ **TDSನ್ನು ಸಂಬಂಧಪಟ್ಟ ಇಲಾಖೆಗೆ ಪಾವತಿಸುವುದು, ಇಲ್ಲವಾದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಮರುಪಾವತಿ ಮಾಡುವುದು.**

  2. ದಿನಾಂಕ:01-07-2017ರ ನಂತರ ನಿರ್ವಹಿಸುವ ಸರ್ಕಾರಿ ಅನುದಾನದ ಕಾಮಗಾರಿಗಳಿಗೆ / ಸರಬರಾಜುಗಳಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಸೆಕ್ಷನ್ 51 ರಂತೆ CGST ಶೇ.1% ಮತ್ತು SGST ಶೇ.1%ನ್ನು ಬಿಲ್ಲಿನಲ್ಲಿ ಕಟಾಯಿಸದೆ ಬಿಲ್ಲನ್ನು ಅಂಗೀಕರಿಸುವುದು. ಸದರಿ ಬಿಲ್ಲನ್ನು ಪಾವತಿಯ ಸಂದರ್ಭದಲ್ಲಿ ಸದರಿ ಸೆಕ್ಷನ್ 51 ಜಾರಿಯಿದ್ದಲ್ಲಿ **TDS ನ್ನು ಮುಖ್ಯಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಕಟಾಯಿಸುವುದು.**

  3. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಸೆಕ್ಷನ್ 51 ಜಾರಿಯಾದ ದಿನಾಂಕದಿಂದ CGST ಶೇ.1% ಮತ್ತು SGST ಶೇ.1% ರಂತೆ ಟಿ.ಡಿ.ಎಸ್ ಕಟಾಯಿಸುವುದು.

- **ದಿನಾಂಕ:30-06-2017ರೊಳಗೆ ಪಾಲಿಕೆಯಿಂದ ಗುತ್ತಿಗೆದಾರರಿಗೆ ವಹಿಸಿರುವ ಕಾಮಗಾರಿಗಳ ಬಗ್ಗೆ :**

  1. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಜಾರಿಯಾದ ನಂತರ ಸರಕು ಮತ್ತು ಸೇವೆಯ ದರದಲ್ಲಿ ಯಾವುದೇ ವ್ಯತ್ಯಾಸವಾಗದ ಸಂದರ್ಭಗಳಲ್ಲಿ ಪಾಲಿಕೆಯಿಂದ ವಹಿಸಿರುವ ಕಾಮಗಾರಿಗಳು (ಟೆಂಡರ್ ಮೂಲಕ ಮತ್ತು ನೇರವಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ) ಈಗಾಗಲೇ ಎಲ್ಲಾ ತೆರಿಗೆಯನ್ನು ಒಳಗೊಂಡಿರುವ ಹಿನ್ನಲೆಯಲ್ಲಿ ದಿನಾಂಕ:01-07-2017ರ ಒಳಗಾಗಿ ಟೆಂಡರ್ ಕರೆದಿರುವ/ಕಾರ್ಯಾದೇಶ ನೀಡಿರುವ/ ಕಾಮಗಾರಿ ಪ್ರಗತಿಯಲ್ಲಿರುವ/ಕಾಮಗಾರಿಯು ಭಾಗಶಃ ಪೂರ್ಣಗೊಳಿಸಿರುವ (Running Bills) ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಾಲಿ ವಹಿಸಿರುವ ಟೆಂಡರನ್ನು ಟೆಂಡರ್ ಮೊತ್ತದ ಮಿತಿಯಲ್ಲಿಯೇ ನಿರ್ವಹಿಸುವುದು.

2. ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಜಾರಿಯಾದ ನಂತರ ಸರಕು ಮತ್ತು ಸೇವೆಯ ದರದಲ್ಲಿ ಹೆಚ್ಚಳವಾದ ಸಂದರ್ಭಗಳಲ್ಲಿ, ಹೆಚ್ಚಳವು ಯಾವ ರೀತಿಯಾಗಿ ಹೆಚ್ಚುವರಿಯಾಗುತ್ತಿದೆ ಎಂಬುದಕ್ಕೆ ಅಗತ್ಯ ದಾಖಲೆ ಮತ್ತು ಸಂಪೂರ್ಣ ವಿವರಗಳೊಂದಿಗೆ, ಲೋಕೋಪಯೋಗಿ ಇಲಾಖೆಯಲ್ಲಿ ಎಸ್.ಆರ್. ದರ ಸಿದ್ದಪಡಿಸುವ ಮುಖ್ಯ/ಅದೀಕ್ಷಕ ಅಭಿಯಂತರರಿಂದ ದೃಡೀಕರಣ ಪಡೆದು ನಂತರ ಸಕ್ಷಮ ಪ್ರಾಧೀಕಾರದ ಅನುಮೋದನೆಗೆ ಸಲ್ಲಿಸುವುದು.

3. ಹಾಲಿ ವಹಿಸಿರುವ ಕಾಮಗಾರಿಗಳು ಈಗಾಗಲೇ ಎಲ್ಲಾ ತೆರಿಗೆಯನ್ನು ಒಳಗೊಂಡಿರುವ ಹಿನ್ನಲೆಯಲ್ಲಿ ಟೆಂಡರ್ ಪರಿಮಾಣದಲ್ಲಿ ಯಾವುದೇ ವ್ಯತ್ಯಾಸ/ಕಡಿತ ಮಾಡದೆ **ಟೆಂಡರ್ ದರದಲ್ಲಿ ಮಾತ್ರ** ತೆರಿಗೆಯನ್ನು ಬೇರ್ಪಡಿಸಿ ಟೆಂಡರನ್ನು ಪರಿಷ್ಕರಿಸಿ ಸಲ್ಲಿಸಲು ಗುತ್ತಿಗೆದಾರರಿಗೆ ಸೂಚಿಸುವುದು. ಅದರಂತೆ ಟೆಂಡರ್ ಮೊತ್ತವನ್ನು ಕಾಮಗಾರಿ ವೆಚ್ಚ+ಸಿ.ಜಿ.ಎಸ್.ಟಿ+ಕೆ.ಜಿ.ಎಸ್.ಟಿ ಯಂತೆ ಬೇರ್ಪಡಿಸಿ ಸಲ್ಲಿಸುವುದು. (Work Base Cost+CGST+SGST=Tender Amount) ಕೆ.ಆರ್.ಐ.ಡಿ.ಎಲ್ ಸಂಸ್ಥೆ ಕಾಮಗಾರಿಗಳಿಗೆ ಅಗತ್ಯ ಸೇವಾ ವೆಚ್ಚವನ್ನು ಪರಿಗಣಿಸುವುದು ({Work Base Cost+KRIDL Charges+Labour CESS}+CGST+ SGST = Entrusted Amount). ಈ ರೀತಿ ಬೇರ್ಪಡಿಸಲು ಪ್ರತಿ ಐಟಮ್ ದರವು ತೆರಿಗೆ ಒಳಗೊಂಡಿದೆ ಎಂದು ಭಾವಿಸಿ ಲೆಕ್ಕಹಾಕುವುದು ಅಂದರೆ (Item Rate/(100+ tax)*100, For example: 50/118*100=42.37)

4. ಟೆಂಡರ್ ದರಗಳನ್ನು ಪರಿಷ್ಕರಿಸಿ ಸಲ್ಲಿಸುವ ಸಂದರ್ಭದಲ್ಲಿ ಮೂಲ ದರದಲ್ಲಿ ತೆರಿಗೆ ಕಡಿತದಿಂದ ಉಂಟಾಗುವ ಉಳಿತಾಯವನ್ನು ಜಿ.ಎಸ್.ಟಿ ಕಾಯಿದೆಯಂತೆ "Anti-profiteering Measure.- (1) Any reduction in rate of tax on any supply of goods or services or the benefit of input tax credit shall be passed on to the recipient by way of commensurate reduction in prices." ಟೆಂಡರ್ ದರದಲ್ಲಿ ಕಡಿತಗೊಳಿಸಿ ಸಲ್ಲಿಸಲು ಸೂಚಿಸುವುದು.

- **ಟೆಂಡರ್ ಕರೆಯಲು ಬಾಕಿ ಇರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ** :

ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಜಾರಿಯಾದ ನಂತರ ಹಾಲಿ ಇರುವ PWD S.R. ದರ ಪರಿಷ್ಕರಿಸುವವರೆವುಗೂ, PWD ಹಾಲಿ S.R. ದರದಂತೆ ತಗಲುವ ವೆಚ್ಚ + Tender Premium 10% ಅವಕಾಶ + DPR & PMC ಗೆ ಅವಕಾಶ ಕಲ್ಪಿಸಿಕೊಂಡು ಅಂದಾಜು ಪಟ್ಟಿಯನ್ನು ಪರಿಷ್ಕರಿಸುವುದು/ತಯಾರಿಸುವುದು (Work base cost + Tender Premium + DPR& PMC = Estimate Amount). ಆದರೆ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರಿಗೆ ಟೆಂಡರ್ ದರ ನಮೂದಿಸುವ ಸಂದರ್ಭದಲ್ಲಿ ಪ್ರತಿ ಐಟಮ್ ದರಗಳಿಗೆ ಜಿ.ಎಸ್.ಟಿ ಹೊರತುಪಡಿಸಿ ನಮೂದಿಸಲು ಮತ್ತು ಕೊನೆಯಲ್ಲಿ ಪ್ರತ್ಯೇಕವಾಗಿ ಜಿ.ಎಸ್.ಟಿ ನಮೂದಿಸಲು ಟೆಂಡರ್ ಷರತ್ತುಗಳಲ್ಲಿ ಸೂಚಿಸುವುದು. ಗುತ್ತಿಗೆದಾರರು ನಮೂದಿಸಿರುವ ಟೆಂಡರನ್ನು (ಜಿ.ಎಸ್.ಟಿ ದರಗಳನ್ನು ಒಳಗೊಂಡಂತೆ) ಅಂದಾಜುಪಟ್ಟಿಯೊಂದಿಗೆ ಹೋಲಿಸಿ/ ತುಲನೆ ಮಾಡಿ ಹೆಚ್ಚು ಅಥವಾ ಕಡಿಮೆಯನ್ನು ಲೆಕ್ಕ ಹಾಕುವುದು.

- **ಕೆ.ಆರ್.ಐ.ಡಿ.ಎಲ್ ಅಥವಾ ಇತರೇ ಸಂಸ್ಥೆಗಳಿಗೆ ನೇರವಾಗಿ ವಹಿಸುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ** :

ಜಿ.ಎಸ್.ಟಿ ಜಾರಿಯಾದ ನಂತರ ಹಾಲಿ ಇರುವ PWD S.R. ದರ ಪರಿಷ್ಕರಿಸುವವರೆವುಗೂ, PWD ಹಾಲಿ S.R.

ದರದಂತೆ ತಗಲುವ ವೆಚ್ಚ + ಸೇವಾ ವೆಚ್ಚಕ್ಕೆ ಅವಕಾಶ + DPR & PMC ಗೆ ಅವಕಾಶ ಕಲ್ಪಿಸಿಕೊಂಡು ಅಂದಾಜು ಪಟ್ಟಿಯನ್ನು ಪರಿಷ್ಕರಿಸುವುದು/ತಯಾರಿಸುವುದು (Work base cost + Service Charges + DPR&PMC=Estimate Amount). ಸದರಿ ಕಾಮಗಾರಿಯನ್ನು ವಹಿಸುವ ಸಂದರ್ಭದಲ್ಲಿ ಕೆ.ಆರ್.ಐ.ಡಿ.ಎಲ್/ ಇತರೇ ಸಂಸ್ಥೆಗಳಿಗೆ {(ಕಾಮಗಾರಿಗೆ ತಗಲುವ ವೆಚ್ಚ+ಸೇವಾ ವೆಚ್ಚ)+ಜಿ.ಎಸ್.ಟಿ} ಯಂತೆ ಪ್ರತ್ಯೇಕವಾಗಿ ಬೇರ್ಪಡಿಸಿ ಕಾಮಗಾರಿಯನ್ನು ನಿರ್ವಹಿಸಲು ತಗಲುವ ಅಂದಾಜು ವೆಚ್ಚದ ವಿವರಗಳನ್ನು ಪ್ರತ್ಯೇಕವಾಗಿ ನೀಡಲು ಸೂಚಿಸುವುದು. ಈ ರೀತಿ **ಕೆ.ಆರ್.ಐ.ಡಿ.ಎಲ್ ಅಥವಾ ಇತರೇ ಸಂಸ್ಥೆ** ನೀಡಿದ ಕಾಮಗಾರಿ ಅಂದಾಜು ವೆಚ್ಚವು, ಪಾಲಿಕೆಯು ತಯಾರಿಸಿದ ಕಾಮಗಾರಿಯ ಅಂದಾಜು ವೆಚ್ಚಕ್ಕಿಂತ ಹೆಚ್ಚುವರಿಯಾಗತಕ್ಕದಲ್ಲ.

ಜಿ.ಎಸ್.ಟಿ ಜಾರಿಯಾದ ನಂತರ ಪರಿಷ್ಕೃತ PWD S.R. ದರಗಳು ಜಾರಿಯಾದಲ್ಲಿ ಅದರಂತೆ **ತಗಲುವ ವೆಚ್ಚವನ್ನು** ಪರಿಗಣಿಸಿ ಮೇಲಿನಂತೆ ಕ್ರಮವಹಿಸುವುದು.

- **ಈಗಾಗಲೇ ಟೆಂಡರ್ ಅವಧಿ ಮುಕ್ತಾಯವಾಗಿದ್ದು, ಹೊಸದಾಗಿ ಟೆಂಡರ್ ಕರೆಯದೇ, ಹಳೇ ಗುತ್ತಿಗೆದಾರರನ್ನೇ ಮುಂದುವರಿಸುತ್ತಿರುವ ಬಗ್ಗೆ :**
  ದಿನಾಂಕ: 01-07-2017 ರಿಂದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ-2017 ಜಾರಿಯಿಂದಾಗಿ ಭಾರತದ ತೆರಿಗೆ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆಯಾಗಿರುವ ಹಿನ್ನೆಲೆಯಲ್ಲಿ, ಪಾಲಿಕೆಯಲ್ಲಿ ಈ ಹಿಂದೆ ಟೆಂಡರ್ ಕರೆದು ಟೆಂಡರ್ ಅವಧಿ ಮುಕ್ತಾಯಗೊಂಡಿರುವ ಆದರೆ ಹಲವಾರು ಕಾರಣಗಳಿಂದಾಗಿ ಸದರಿ ಟೆಂಡರ್ ದರದಂತೆ ಗುತ್ತಿಗೆದಾರರನ್ನು ಮುಂದುವರಿಸುತ್ತಿರುವ **ಎಲ್ಲಾ ಟೆಂಡರ್‌ಗಳನ್ನು ರದ್ದುಪಡಿಸಲಾಗಿದೆ.** ಅಂತಹ ಎಲ್ಲಾ ಗುತ್ತಿಗೆದಾರರನ್ನು ದಿನಾಂಕ: 31-10-2017 ರ ವರೆಗೆ ಮಾತ್ರ ಮುಂದುವರೆಸುವುದು. ದಿನಾಂಕ:31-10-2017 ರ ಒಳಗಾಗಿ ಮೇಲಿನ ಸೂಚನೆಗಳನ್ನು ಅಳವಡಿಸಿಕೊಂಡು ನೂತನ ಟೆಂಡರನ್ನು ಕರೆದು ಅದರಂತೆ ಕಾರ್ಯನಿರ್ವಹಿಸುವುದು.

  **ಉದಾಹರಣೆಗೆ:** ತೋಟಗಾರಿಕೆಗೆ ನಿರ್ವಹಣೆ ಕಾಮಗಾರಿಗಳು, ನಗರ ಅರಣ್ಯೀಕರಣ ನಿರ್ವಹಣೆ ಕಾಮಗಾರಿಗಳು, ಘನತ್ಯಾಜ್ಯ ವಸ್ತು ನಿರ್ವಹಣೆ ಮತ್ತು ಸಂಬಂಧಿಸಿದ ಕಾಮಗಾರಿಗಳು, ಸೊಳ್ಳೆ ನಿಯಂತ್ರಣ ಕಾಮಗಾರಿಗಳು, ಸ್ವಚ್ಚತಾ ನಿರ್ವಹಣೆ ಕಾಮಗಾರಿಗಳು, ಭದ್ರತಾ ವ್ಯವಸ್ಥೆ ಕಾಮಗಾರಿಗಳು, ಬೀದಿ ದೀಪ ನಿರ್ವಹಣೆ ಕಾಮಗಾರಿಗಳು, ಇತರೇ ಕಾಮಗಾರಿಗಳು.

ಪಾಲಿಕೆಯಲ್ಲಿ ಸರಕು ಮತ್ತು ಸೇವೆ/ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಮುನ್ನಾ, ಮೇಲಿನ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅನುಷ್ಠಾನಗೊಳಿಸುವುದು ಹಾಗೂ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯಲ್ಲಿ ಆಗಿಂದ್ದಾಗ್ಗೆ ಉಂಟಾಗಬಹುದಾದ ಬದಲಾವಣೆಗಳನ್ನು ಅಳವಡಿಸಿಕೊಂಡು, ಅದರಂತೆ ಪಾಲಿಕೆಗೆ ಯಾವುದೇ ಹೆಚ್ಚಿನ ಹಣಕಾಸಿನ ಹೊರೆಯುಂಟಾಗದಂತೆ ಎಚ್ಚರವಹಿಸಲು ಎಲ್ಲಾ ಬಟವಾಡೆ ಅಧಿಕಾರಿ ಸೂಚಿಸಲಾಗಿದೆ. ಅನುಷ್ಠಾನ ಅಧಿಕಾರಿಗಳ ತಪ್ಪಿನಿಂದ ತೆರಿಗೆ ರೂಪದಲ್ಲಿ ಪಾಲಿಕೆಗೆ ಯಾವುದೇ ಹೆಚ್ಚುವರಿ ಹಣಕಾಸಿನ ಹೊರೆಯಾದಲ್ಲಿ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಂದಲೇ ವಸೂಲಿಗೆ ಕ್ರಮಕೈಗೊಳ್ಳಲಾಗುವುದು.

ಸರಕು ಮತ್ತು ಸೇವಾ ತೆರಿಗೆ ಕಾಯ್ದೆ–2017 ಕ್ಕೆ ಸಂಬಂಧಿಸಿದಂತೆ ಮೇಲಿನ ಸೂಚನೆಗಳಲ್ಲಿ ಯಾವುದಾದರು ವ್ಯತಿರಿಕ್ತ ಸೂಚನೆಗಳಿದ್ದಲ್ಲಿ ಅಂತಹ ಸಂದಭಗಳಲ್ಲಿ ಸಂಬಂಧಪಟ್ಟ ಕಾಯಿದೆ/ನಿಯಮ/ಅಧಿಸೂಚನೆಗಳಂತೆ ಕ್ರಮವಹಿಸಲು ಸೂಚಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಪ್ರತಿಯನ್ನು:**

1. ಪೂಜ್ಯ ಮಹಾಪೌರರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪಮಹಾಪೌರರರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
3. ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
4. ಕೌನ್ಸಿಲ್ ಕಾರ್ಯದರ್ಶಿರವರು ಸಂಬಂಧಪಟ್ಟ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳ ಗಮನಕ್ಕೆ ತರಲು ಕಳುಹಿಸಿದೆ.
5. ವಿಶೇಷ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ ಕಳುಹಿಸಿದೆ.
6. ವಿಶೇಷ ಆಯುಕ್ತರು (ಹಣಕಾಸು) ರವರ ಮಾಹಿತಿಗಾಗಿ ಕಳುಹಿಸಿದೆ.
7. ವಿಶೇಷ ಆಯುಕ್ತರು (ಆಡಳಿತ/ಕಲ್ಯಾಣ/ವಿದ್ಯೆ/ಆಸ್ತಿಗಳು/ಕಂದಾಯ) ರವರ ಮಾಹಿತಿಗಾಗಿ ಕಳುಹಿಸಿದೆ.
8. ಮುಖ್ಯಸ್ಥರು, ಕಾನೂನು ಕೋಶ ವಿಭಾಗರವರ ಮಾಹಿತಿಗಾಗಿ.
9. ಜಂಟಿ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ./ಕಂದಾಯ) ರವರಿಗೆ ಮಾಹಿತಿಗಾಗಿ.
10. ಅಪರ/ಜಂಟಿ ಆಯುಕ್ತರು, ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11. ಪ್ರಧಾನ ಅಭಿಯಂತರರು, ರವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
12. ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಆರ್ಥಿಕ ಅಧಿಕಾರಿಗಳು (ಜೆಎನ್‌ಎನ್‌ಯುಆರ್‌ಎಂ) ರವರಿಗೆ ಸೂಕ್ತ ಕ್ರಮಕ್ಕಾಗಿ
13. ಮುಖ್ಯ ಆರೋಗ್ಯಾಧಿಕಾರಿಗಳು (ಸಾಮಾನ್ಯ/ಕ್ಲಿನಿಕಲ್) ರವರಿಗೆ ಮುಂದಿನ ಕ್ರಮಕ್ಕಾಗಿ.
14. ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ/ಬೃಹತ್ ಮಳೆ ನೀರುಗಾಲುವೆ/ಬೃಹತ್ ರಸ್ತೆಗಳು/ಯೋಜನೆ/ ಕೆರೆಗಳು/ಘ.ತ್ಯಾ.ನಿ.ರವರಿಗೆ ಮುಂದಿನ ಕ್ರಮಕ್ಕಾಗಿ.
15. ಉಪ ಆಯುಕ್ತರು (ಆಡಳಿತ/ಕಂದಾಯ/ಆಸ್ತಿಗಳು/ಜಾಹೀರಾತು) ರವರಿಗೆ ಮುಂದಿನ ಕ್ರಮಕ್ಕಾಗಿ.
16. ಪಾಲಿಕೆಯ ಎಲ್ಲಾ ವಲಯದ ಮುಖ್ಯ ಅಭಿಯಂತರರು/ ಎಲ್ಲಾ ವಿಭಾಗೀಯ ಕಾ.ಪಾ.ಅಭಿಯಂತರರಿಗೆ ಸೂಕ್ತ ಕ್ರಮಕ್ಕಾಗಿ.
17. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು/ಕಲ್ಯಾಣಾಧಿಕಾರಿಗಳು ರವರಿಗೆ ಮುಂದಿನ ಕ್ರಮಕ್ಕಾಗಿ.
18. ವಲಯ ಸಹಾಯಕ /ಉಪ ನಿಯಂತ್ರಕರು (ಹಣಕಾಸು), ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
19. ಜಂಟಿ/ಉಪ ನಿರ್ದೇಶಕರು, ತೋಟಗಾರಿಕೆ/ಪಶುಸಂಗೋಪನೆ/ಅಂಕಿ ಅಂಶಗಳು/ನಗರಯೋಜನೆ ರವರಿಗೆ ಮಾಹಿತಿಗಾಗಿ.
20. ತೋಟಗಾರಿಕೆ ಅಧೀಕ್ಷಕರು ಪೂರ್ವ, ಪಶ್ಚಿಮ, ದಕ್ಷಿಣ, ಯಲಹಂಕ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ವಲಯ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
21. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ರವರಿಗೆ ಮುಂದಿನ ಕ್ರಮಕ್ಕಾಗಿ.
22. ವಿದ್ಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
23. ಮಾಹಿತಿ ತಂತ್ರಜ್ಞಾನ ಸಲಹೆಗಾರರು, ಬೃ.ಬೆ.ಮ.ಪಾ. ಬೆಂಗಳೂರು ರವರಿಗೆ ಪಾಲಿಕೆ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.
24. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.